**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222 ಫೋ: 08182 246165 www.shimul.coop**

# ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ/ಶಿಸಹಾಒ/ಶೇಮತಾಂ/ಲಸಿಕಾ. ಕಾ/130/**7619** /2018-19 **ದಿನಾಂಕ: 02.01.2019**

ಕರ್ನಾಟಕ ಸರ್ಕಾರದ ಪಶುಸಂಗೋಪನಾ ಇಲಾಖಾವತಿಯಿಂದ ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ರೈತರ ಜಾನುವಾರುಗಳಿಗೆ ಕಾಲು ಬಾಯಿ ರೋಗ ನಿಯಂತ್ರಣಾ ಲಸಿಕೆ ಕಾರ್ಯಕ್ರಮವು **ದಿನಾಂಕ 28.01.2019 ರಿಂದ 12.02.2019 ರವರೆಗೆ** ಅಂದಾಜು 15 ದಿನಗಳ ಕಾಲ ನಡೆಯಲಿದ್ದು, ಈ ಅವಧಿಗೆ ಶಿವಮೊಗ್ಗ ಹಾಲು ಒಕ್ಕೂಟದವತಿಯಿಂದ ವಾಹನಗಳನ್ನು ಪಡೆದು ಪಶುಸಂಗೋಪನಾ ಇಲಾಖೆಗೆ ಒದಗಿಸಲು ಕರ್ನಾಟಕ ಸರ್ಕಾರದ ಪಾರದರ್ಶಕ ನಿಯಮದಡಿ ವಾಹನಗಳ ಟೆಂಡರ್ ಕರೆದಿದ್ದು, **ಹಳದಿ ಬೋರ್ಡ್** ಹೊಂದಿರುವ 6 ರಿಂದ 8 ಜನ ಪ್ರಯಾಣಿಸಲು ಅನುಕೂಲಕರವಾದ **ಟೆಂಪೊಟ್ರಾಕ್ಸ್/ಕ್ರೂಷರ್/ಟಾಟಾಸುಮೋ/ಮಾರುತಿವ್ಯಾನ್/ಮಾಕ್ಸಿಮೋ** ದಿನ ಬಾಡಿಗೆ ಆಧಾರದಲ್ಲಿ ಒದಗಿಸಬೇಕಾಗಿರುತ್ತದೆ. ಹಳದಿ ಬೋರ್ಡ್ ವಾಹನ ಹೊಂದಿರುವ, ಆಸಕ್ತ ವಾಹನ ಮಾಲೀಕರು ಶಿವಮೊಗ್ಗ ಹಾಲು ಒಕ್ಕೂಟದಿಂದ ಟೆಂಡರ್ ಫಾರಂ ಪಡೆದು ಭರ್ತಿ ಮಾಡಿ ಸಲ್ಲಿಸಬಹುದು. **ಪ್ರತಿ ಒಂದು ವಾಹನಕ್ಕೆ ಪ್ರತ್ಯೇಕ ಅರ್ಜಿಯನ್ನು ಭರ್ತಿ ಮಾಡಿ ರೂ. 2000/- ಇ.ಎಂ.ಡಿ.ಯೊಂದಿಗೆ(ನಗದು/ಡಿ.ಡಿ) ಸಲ್ಲಿಸುವುದು. ಅವಶ್ಯವಿರುವ ವಾಹನಗಳ ವಿವರ ಈ ಕೆಳಕಂಡಂತೆ ಇರುತ್ತದೆ.** ವಾಹನ ಮಾಲೀಕರು ಕಡ್ಡಾಯವಾಗಿ ಪಾನ್‌ಕಾರ್ಡ್ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕಾಗಿರುತ್ತದೆ.

**ಟೆಂಡರ್ ಫಾರಂ ದರ ರೂ. 100/- GST ಪ್ರತ್ಯೇಕ**

**ಟೆಂಡರ್ ಫಾರಂ ಮಾರಾಟ ದಿನಾಂಕ : 07.01.2019 ರಿಂದ 24.01.2019 ಬೆಳಿಗ್ಗೆ 11.00 ಗಂಟೆಯವರೆಗೆ**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24.01.2019 ಬೆಳಿಗ್ಗೆ 11.25 ಗಂಟೆಯವರೆಗೆ.**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ತೆರೆಯುವ/ದರ ಸಂಧಾನ ಮಾಡುವ ದಿನಾಂಕ:24.01.2019 ಬೆಳಗ್ಗೆ- 11.30 ಗಂಟೆಗೆ**

**ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಚಲಿಸಬೇಕಾಗಿರುವ ಮತ್ತು ಅವಶ್ಯವಿರುವ ವಾಹನಗಳ ವಿವರ ಈ ಕೆಳಕಂಡಂತಿದೆ.**

| ಕ್ರ. ಸಂ | ಶಿವಮೊಗ್ಗ ಜಿಲ್ಲೆ | ಟಾಟಾ ಸುಮೋ/ಕ್ರೂಷರ್‌ಗಳು ಮಾತ್ರ | ದಾವಣಗೆರೆ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ | ಚಿತ್ರದುರ್ಗ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ |
|---|---|---|---|---|---|---|
| 1 | ಶಿವಮೊಗ್ಗ ತಾ|| | 6 | ದಾವಣಗೆರೆ ತಾ|| | 7 | ಚಿತ್ರದುರ್ಗ ತಾ|| | 5 |
| 2 | ಭದ್ರಾವತಿ ತಾ|| | 5 | ಹರಿಹರ ತಾ|| | 4 | ಹೊಸದುರ್ಗ ತಾ|| | 4 |
| 3 | ಸಾಗರ ತಾ|| | 1 | ಚನ್ನಗಿರಿ ತಾ|| | 7 | ಹೊಳಲ್ಕೆರೆ ತಾ|| | 4 |
| 4 | ಸೊರಬ ತಾ|| | 5 | ಹೊನ್ನಾಳಿ ತಾ|| | 7 | ಮೊಳಕಾಲ್ಮೂರು ತಾ|| | 3 |
| 5 | ಶಿಕಾರಿಪುರ ತಾ|| | 6 | ಜಗಳೂರು ತಾ|| | 2 | ಹಿರಿಯೂರು ತಾ|| | 5 |
| | | | ಹರಪನಹಳ್ಳಿ ತಾ|| | 5 | ಚಳ್ಳಕೆರೆ ತಾ|| | 4 |
| ಒಟ್ಟು | | 23 | ಒಟ್ಟು | 32 | ಒಟ್ಟು | 25 |

ಟೆಂಡರ್ ಫಾರಂಗಳು ಶಿವಮೊಗ್ಗ ಹಾಲು ಒಕ್ಕೂಟ, ಮಾಚೇನಹಳ್ಳಿ ಶಿವಮೊಗ್ಗ, ಇಲ್ಲಿ ದಿನಾಂಕ: 07.01.2019 ರಿಂದ 24.01.2019 ರವರೆಗೆ ಹಾಗೂ ದಾವಣಗೆರೆ ಡೈರಿ ದೊಡ್ಡಬಾತಿ ದಾವಣಗೆರೆ, ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರ, ಚಿತ್ರದುರ್ಗದಲ್ಲಿ ದಿನಾಂಕ:07.01.2019 ರಿಂದ 23.01.2019 ರವರೆಗೆ ಮಾತ್ರ ದೊರೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಹಾಲು ಒಕ್ಕೂಟದ (ಶೇಮತಾಂ) ವಿಭಾಗವನ್ನು ಸಂಪರ್ಕಿಸಬಹುದಾಗಿದೆ

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**